## ವಾರ್ತಾ ವಿಶ್ಲೇಷಣೆ

# ನಮ್ಮದಾಗಲಿ ಸದೃಢ ದೇಶ

**ನ**ಮ್ಮದು ಸ್ವಾಭಿಮಾನರಹಿತ ರಾಷ್ಟ್ರವೇ? ಮುಂಬೈಯಲ್ಲಿ ನಡೆದ ಭಯೋತ್ಪಾದಕ ದಾಳಿಗಳ ನಂತರದ ವಿದ್ಯಮಾನಗಳನ್ನು ನೋಡಿದರೆ, ಹೌದೆಂದೇ ಅನ್ನಿಸುತ್ತದೆ. ಕೇಂದ್ರಸರ್ಕಾರವು ಕೆಲವು ಪೊಳ್ಳು ಹೇಳಿಕೆಗಳನ್ನು ನೀಡಿದೆಯಷ್ಟೆ; ಕಣ್ಣೊರೆಸುವ ಕೆಲವು ಕ್ರಮಗಳನ್ನು ಕೈಗೊಂಡಿದೆಯಷ್ಟೆ. ಈ ಬಗೆಯ ಭೀಕರ ಮತ್ತು ನಿರ್ಲಜ್ಜ ಧಾಳಿಯ ವಿರುದ್ಧ ಒಂದಾದರೂ ಕಠಿಣ ಕ್ರಮ ಕೈಗೊಂಡಿಲ್ಲ; ಆ ಮೂಲಕ ನಮ್ಮ ಜನರಲ್ಲಿ ಭದ್ರತೆಯ ಭಾವನೆಯನ್ನು ಉಂಟುಮಾಡಲು ಮುಂದಾಗಿಲ್ಲ. ಹೀಗೇಕೆ? ಏಕಿಷ್ಟು ನಾವು ಹೇಡಿಗಳಾಗಿದ್ದೇವೆ? ಇದು ನಮ್ಮ ರಕ್ತದಲ್ಲಿಯೇ ಇರುವ ಅಸಹ್ಯ ಅಂಶವೋ, ಹೇಗೆ?

ಇದಕ್ಕೆ ತದ್ವಿರುದ್ಧವಾಗಿ, ಇಸ್ರೇಲ್ ದೇಶವು ಹಮಾಸ್ ಎಂಬ ಮುಸ್ಲಿಂ ಭಯೋತ್ಪಾದಕ ಗುಂಪನ್ನು ಆಮೂಲಾಗ್ರವಾಗಿ ಮಟ್ಟ ಹಾಕುತ್ತಿರುವ ಬಗೆಯನ್ನು ನೋಡಿ. ಹಾಗೆಂದು ನಾವು ಇಸ್ರೇಲಿನವರಂತೆ ಕ್ರೂರರಾಗಬೇಕಿಲ್ಲ. ಭಾರತಕ್ಕಿಂತ ಅತಿ ಚಿಕ್ಕ ರಾಷ್ಟ್ರವಾದರೂ, ಶತ್ರುದೇಶಗಳೇ ಎಲ್ಲ ದಿಕ್ಕುಗಳಲ್ಲೂ ಸುತ್ತುವರಿದಿದ್ದರೂ, ನಿರ್ದಾಕ್ಷಿಣ್ಯವಾಗಿ ಕ್ರಮಕೈಗೊಳ್ಳುವ ಯಹೂದಿಗಳ ಎದೆಗಾರಿಕೆಗೂ, ಭಾರತೀಯರ ಪುಕ್ಕಲುತನಕ್ಕೂ ಎಂತಹ ಅಜಗಜಾಂತರ!

ಈ ದಾಸ್ಯ ಮನೋವೃತ್ತಿ ಮುಸ್ಲಿಂ ಮತ್ತು ಬ್ರಿಟಿಷ್ ಆಡಳಿತಗಳಿಂದ ಬಂದ ಬಳುವಳಿ. 'ಉತ್ಥಾನ' ಪತ್ರಿಕೆಯ ಜನವರಿ ೨೦೦೯ ನೆಯ ಸಂಚಿಕೆ, ಭಾರತ ಮತ್ತು ಪಾಶ್ಚಾತ್ಯಜಗತ್ತಿನ ನಡುವಣ *ಸಂಪರ್ಕ*, *ಸಂವಾದ* ಮತ್ತು *ಸಂಘರ್ಷ*ಗಳ ಹಲವು ಆಯಾಮಗಳ ಗಂಭೀರ ವಿಶ್ಲೇಷಣೆಯನ್ನು ಒಳಗೊಂಡಿದೆ. ಅದರ ಪ್ರಕಾರ, ಸಾಮಾಜ್ರ್ಯಶಾಹಿಯನ್ನು ಬಲಗೊಳಿಸಲೆಂದೇ ಆಧಾರಶೂನ್ಯವಾದ ಸಾಂಸ್ಕೃತಿಕ ಮತ್ತು ಸಾಮಾಜಿಕ ವ್ಯಾಖ್ಯಾನಗಳು ಮೈತಾಳಿದವು. ವಸಾಹತುಶಾಹಿ ಒಂದು ಪರಿಮಿತ ಅರ್ಥದಲ್ಲಿ ಮುಗಿದರೂ, ಸಾಮ್ರಾಜ್ಯಶಾಹಿ ಬುದ್ಧಿವೃತ್ತಿಯು ಹಿಂದಿದ್ದಂತೆ ಮುಂದುವರಿದಿದೆ. ಆದ್ದರಿಂದಲೇ, ಅಧೀನರಾಷ್ಟ್ರದ ಬುದ್ಧಿವೃತ್ತಿಯೂ ಸ್ವಾತಂತ್ರ್ಯಪೂರ್ವದಲ್ಲಿದ್ದಂತೆ ಮುಂದುವರಿದುಕೊಂಡುಬಂದಿದೆ. ಹೀಗಾಗಿ, ನಾವು ಸ್ವತಂತ್ರರು, ನಮ್ಮ ರಾಷ್ಟ್ರಗೌರವ ಎಲ್ಲಕ್ಕಿಂತ ಹೆಚ್ಚಿನದು ಎಂಬ ಮನೋಭಾವನೆಯೇ ಇನ್ನೂ ನಮ್ಮಲ್ಲಿ ಹುಟ್ಟಿಲ್ಲ ಎನ್ನಬಹುದು.

ಶ್ರೀ ಎಸ್. ಆರ್. ರಾಮಸ್ವಾಮಿ ಅವರು, ಉತ್ಥಾನ ಪತ್ರಿಕೆಯಲ್ಲಿನ ತಮ್ಮ ಲೇಖನದಲ್ಲಿ, ತಾವು ಆಳುವ ಜನಾಂಗದ ನಾಗರಿಕತೆ, ಸಂಸ್ಕೃತಿ ಮತ್ತು ಸ್ವಂತಿಕೆಗಳನ್ನು ದಮನಗೊಳಿಸುವುದೇ ವಸಾಹತುಶಾಹಿ ಶಕ್ತಿಗಳ ಮುಖ್ಯ ಉದ್ದೇಶವಾಗಿತ್ತು ಎಂದು ಹೇಳುತ್ತಾರೆ. ಅದಕ್ಕಾಗಿ ಕ್ರೈಸ್ತಧರ್ಮವನ್ನು ಉಪಯೋಗಿಸಿಕೊಳ್ಳಲಾಯಿತು. ಹಾಗೆಂದೇ, ರೋಮನ್ ಮತ್ತು ಗ್ರೀಕ್ ನಾಗರಿಕತೆಗಳು, ಕ್ರೈಸ್ತೀಕರಣದ ಆವೇಶದಲ್ಲಿ ನಿರ್ನಾಮವಾದುವು. ಮೆಕ್ಸಿಕೋ ಮುಂತಾದ ಲ್ಯಾಟಿನ್ ಅಮೆರಿಕ ಪ್ರದೇಶದಲ್ಲಿದ್ದ ಸಮೃದ್ಧ ನಾಗರಿಕತೆ, ನರಮೇಧ ನಡೆಸಿದ ಕ್ರೈಸ್ತ ಧಾರ್ಮಿಕ ಮುಖಂಡರ ಕ್ರೌರ್ಯಕ್ಕೆ ಸಿಲುಕಿ, ಹೇಳಹೆಸರಿಲ್ಲದಾಯಿತು. ಈ ಬಗೆಯ ಆಕ್ರಮಣಶೀಲತೆಯು ಕ್ರೈಸ್ತಧರ್ಮ ಪ್ರಚಾರಕರ ಸಹಜಸ್ವಭಾವವಾಗಿತ್ತೆಂಬುದು ಗಮನಿಸಬೇಕಾದ ಅಂಶ.

ತಮ್ಮ ವಸಾಹತುಗಳನ್ನು ಕಾಪಾಡಿಕೊಂಡು ಬರಲೆಂದೇ, ಪಾಶ್ಚಾತ್ಯರು 'ನಾಗರಿಕತೆ' ಗೆ ಹೊಸ ನಿರ್ವಚನವನ್ನು ನೀಡಿ, ತಮಗಿಂತ ಬೇರೆಯಾದ ಸಂಸ್ಕೃತಿ ಮತ್ತು ಜನಾಂಗಗಳನ್ನು 'ಅನಾಗರಿಕ' ವೆಂದು ಜರಿದರು. ಅವರನ್ನು 'ನಾಗರಿಕ' ಗೊಳಿಸುವುದೇ ತಮ್ಮ ಕರ್ತವ್ಯವೆಂದು ವಸಾಹತುಶಾಹಿಯ ನಿರ್ದಯತೆಯನ್ನು ಸಮರ್ಥಿಸಿಕೊಂಡರು. ಅದಕ್ಕೆ ಧಾರ್ಮಿಕ ಆಯಾಮವನ್ನು ಕೊಟ್ಟ ಕ್ರೈಸ್ತ ಚರ್ಚ್, ದಬ್ಬಾಳಿಕೆಗಾರರ ಸಾಧನವಾಯಿತು.

ಈಗ ವಸಾಹತುಶಾಹಿಯು 'ಜಾಗತಿಕರಣ' ವೆಂಬ ಮುಖವಾಡವನ್ನು ಹೊತ್ತಿದೆ. ಸ್ವಾಯತ್ತ ಸರ್ಕಾರಗಳನ್ನು ವಿಶ್ವಬ್ಯಾಂಕ್, ಐ.ಎಂ.ಎಫ್. ಗಳ ಹೆಸರಿನಲ್ಲಿ ಆರ್ಥಿಕವಾಗಿ ಸ್ವಾಧೀನಪಡಿಸಿಕೊಳ್ಳುವ, ಆ ಮೂಲಕ ತಮ್ಮ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳುವ ಸನ್ನಾಹವನ್ನು ಅಮೆರಿಕ ಮುಂತಾದ ಶ್ರೀಮಂತ ದೇಶಗಳು ನಡೆಸುತ್ತಿವೆ. **ಸ್ವಾಭಿಮಾನಶೂನ್ಯತೆ, ಆತ್ಮವಿಶ್ವಾಸದ ಕೊರತೆ, ಬಡತನ** ಮೊದಲಾದ ಆಂತರಿಕ ಸಮಸ್ಯೆಗಳಿಂದ ಬಳಲುತ್ತಿರುವ ಭಾರತದಂತಹ ದೇಶಗಳು 'ಅಧೀನರಾಷ್ಟ್ರ' ಗಳಾಗಿವೆ.

ಈ ಮಾನಸಿಕ ವಿಕೃತಿಯೇ ನಮ್ಮ ದೇಶವನ್ನು ಕ್ಯಾನ್ಸರ್ ವ್ಯಾಧಿಯಂತೆ, ಒಳಗಿನಿಂದಲೇ ದುರ್ಬಲವನ್ನಾಗಿ ಮಾಡುತ್ತಿರುವುದು. **ದೇಶೀಯ ಸಂಸ್ಕೃತಿಯೇ ಅಂತಃಸತ್ವವಾಗಿ ರೂಪುಗೊಳ್ಳುವ ರಾಷ್ಟ್ರೀಯ ಧೋರಣೆಯೇ ಇದಕ್ಕೆ ಪರಿಹಾರ**. ಇದಕ್ಕೆ ಸ್ವಾಭಿಮಾನದ ಇಂಧನವು ಶಕ್ತಿದಾಯಕವಾಗಬಲ್ಲದು.

ನಮ್ಮ ದೇಶವು ಈ ಬಗೆಯ ಸ್ವಾಭಿಮಾನವನ್ನು ಸ್ವಾಮಿ ವಿವೇಕಾನಂದರ ಬೋಧನೆಗಳ ಮೂಲಕ ಪಡೆಯಬಹುದು. ಪ್ರಾಚೀನ ಜೀವನಮೌಲ್ಯಗಳ ಆಧಾರದ ಮೇಲೆ, ಆಧುನಿಕ ಪರಿಸ್ಥಿತಿಗಳಿಗೆ ಹೊಂದಿಕೊಂಡು ಬಾಳುವ ರಾಷ್ಟ್ರೀಯ ದಿಶೆಯನ್ನು ಅವರು ಉಪದೇಶಿಸಿದ್ದಾರೆ. ಈ ದಾರಿಯೊಂದೇ ನಮ್ಮನ್ನು ಬಲಿಷ್ಠ ರಾಷ್ಟ್ರವನ್ನಾಗಿ ಮಾಡಬಲ್ಲುದು. ಸದೃಢ ಭಾರತ ಮಾತ್ರವೇ ವಿಶ್ವಕ್ಕೆ ಆಧ್ಯಾತ್ಮಿಕ ಮತ್ತು ನೈತಿಕ ಸತ್ಯಗಳನ್ನು ಬೋಧಿಸಬಲ್ಲುದು. ಆ ಚಿರಂತನ ಸತ್ಯಗಳು ಮಾತ್ರವೇ ಈ ವಿಶ್ವದ ಸುಸ್ಥಿತಿಗೆ ಕಾರಣವಾಗಬಲ್ಲುದು. ಹೀಗೆ ಜಗತ್ತಿನಲ್ಲಿ ಸಭ್ಯತೆ ಮತ್ತು ಮಾನವೀಯತೆಗಳನ್ನು ಎತ್ತಿಹಿಡಿಯುವ ಲೋಕಕಲ್ಯಾಣದ ಜವಾಬ್ದಾರಿ ಭಾರತದ ಮೇಲಿದೆ. ಅದನ್ನು ನಾವು ನಿರ್ವಹಿಸಲು ಶಕ್ತರಾಗುತ್ತೇವೆಯೇ?